ದಿನಾಂಕಃ **28.03.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀ ಹೆಚ್.ಎಸ್.ಎಸ್.ರವರಿಂದ ಃ

**1.** ನನ್ನ ಸ್ವಂತ ಸ್ಥಳ ಹಿರೆಮರಳಿ. ನಾನು ಪಾಂಡವಪುರದಲ್ಲಿ 10 ವರ್ಷಗಳಿಂದ ವಾಸವಾಗಿದ್ದೇನೆ. ವಾದಿಗಳು ನನಗೆ ಪರಿಚಿತರು. 2 ನೇ ಪ್ರತಿವಾದಿ ನನಗೆ ಈ ದಾವೆಯನ್ನು ಸಲ್ಲಿಸಿದಾಗಿನಿಂದ ಗೊತ್ತಾಯಿತು. 2 ನೇ ಪ್ರತಿವಾದಿಯ ಕುಟುಂಬದ ಸದಸ್ಯರ ಬಗ್ಗೆ ಗೊತ್ತು. ವಾದಿ-1 ಜಯಮ್ಮ 2 ನೇ ಪ್ರತಿವಾದಿಯ ಅಣ್ಣನ ಹೆಂಡತಿ. ವಾದಿಗಳು ಶ್ರೀರಂಗಪಟ್ಟಣದ ನ್ಯಾಯಾಲಯಲ್ಲಿ 1994 ನೆ ಸಾಲಿನಲ್ಲಿ ಪುಟ್ಟಮ್ಮ ಮತ್ತು ಆಕೆಯ ಇತರೆ ಮಕ್ಕಳ ವಿರುದ್ಧ ಭಾಗಾಂಶಕ್ಕಾಗಿ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಶ್ರೀರಂಗಪಟ್ಟಣದ ನ್ಯಾಯಾಲಯದಿಂದ ಸದರಿ ದಾವೆ ವರ್ಗಾವಣೆಯಾಗಿ ಪಾಂಡವಪುರದಲ್ಲಿ ಅಸಲು ದಾವಾ ಸಂಖ್ಯೆಃ465/1999 ಎಂದು ಹೊಸಾ ನಂಬರ್ ಕೊಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನ್ಯಾಯಾಲಯವು ವಾದಿಗಳ ಪರವಾಗಿ 7/24 ನೇ ಹಿಸ್ಸೆಯನ್ನು ಒಟ್ಟು ಕುಟುಂಬದ ಸ್ವತ್ತುಗಳಲ್ಲಿ ಡಿಕ್ರಿ ಮಾಡಿತು ಎಂದರೆ ಸರಿಯಲ್ಲ. ಡಿಕ್ರಿಯಾದಾರದ ಮೇಲೆ ವಾದಿಗಳು ನ್ಯಾಯಾಲಯದಲ್ಲಿ ಎಫ್.ಡಿ.ಪಿಃ1/2001 ಎಂದು ಸಲ್ಲಿಸಿದರು ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ465/1999, ಎಫ್.ಡಿ.ಪಿಃ1/2001 ರಲ್ಲಿ ಯಾವ ಯಾವ ಸ್ವತ್ತುಗಳಿಗೆ ತೀರ್ಮಾನವಾಗಿತ್ತು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಃ71/1 ಮತ್ತು ಸರ್ವೇ ನಂಃ72/2 ಕ್ಕೆ ಸಂಬಂದಿಸಿದಂತೆ ವಾದಿಗಳು ಮತ್ತು ಅವರ ಕುಟುಂಬದವರ ನಡುವೆ ವ್ಯಾಜ್ಯ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಃ71/1 ಮತ್ತು ಸರ್ವೇ ನಂಃ72/2 ಕ್ಕೆ ನ್ಯಾಯಾಲಯವು 7/24 ನೇ ಹಿಸ್ಸೆಯನ್ನು ವಾದಿಗಳಿಗೆ ಪ್ರಾಥಮಿಕ ಡಿಕ್ರಿಯಂತೆ ಡಿಕ್ರಿ ಮಾಡಿದ್ದರು ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ465/1999 ರ ಪ್ರಾಥಮಿಕ ಡಿಕ್ರಿಯನ್ನು ನಾನು ನೋಡಿಲ್ಲ. ಎಫ್.ಡಿ.ಪಿಃ1/2001 ನ್ನು ವಾದಿಗಳು ಸಲ್ಲಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೇ ನಂಃ71/1 ಮತ್ತು ಸರ್ವೇ ನಂಃ72/2 ದಾಖಲೆಗಳು ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ಸರ್ವೇ ನಂಃ71/1 ರ ಬಗ್ಗೆ ಗೊತ್ತಿಲ್ಲ, ಸರ್ವೇ ನಂಃ72/2 ಚಂದ್ರೇಗೌಡರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಸರ್ವೇ ನಂಃ72/2 ರ ದಾಖಲೆಗಳು ಜಯಮ್ಮನ

ಗಂಡ ಕೃಷ್ಣೇಗೌಡರ ತಾಯಿಯಾದ ಪುಟ್ಟಮ್ಮನ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸರ್ವೇ ನಂಃ71/1 ಮತ್ತು ಸರ್ವೇ ನಂಃ72/2 ರ ಪ್ರಾಥಮಿಕ ಡಿಕ್ರಿಯಂತೆ ವಾದಿಗಳು ತಮ್ಮ ಹಿಸ್ಸಾ ಸ್ವತ್ತನ್ನು ಅಂತಿಮ ಡಿಕ್ರಿಯಂತೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

**2**. ಸರ್ವೇ ನಂಃ71/1 ಕ್ಕೆ ಸಂಬಂದಿಸಿದಂತೆ ಒಳಚರಂಡಿಗೆ ಭೂ-ಸ್ವಾದೀನವಾಗಿದ್ದು ವಾದಿಯ ಕುಟುಂಬದವರು ಮಾನ್ಯ ಹಿರಿಯ ಶ್ರೇಣಿಯ ನ್ಯಾಯಾಲಯದಲ್ಲಿ Ex.23/2021 ರಂತೆ ಹೆಚ್ಚುವರಿ ಪರಿಹಾರದ ಮೊತ್ತವನ್ನು ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೇ ನಂಃ71/1 ರಲ್ಲಿ ಎಫ್.ಡಿ.ಪಿ.ನಂಃ1/2001 ರ ಅಂತಿಮ ಡಿಕ್ರಿಯಂತೆ 7/24 ರ ಹಿಸ್ಸೆ ಪಡೆದುಕೊಂಡಂತೆ ಪರಿಹಾರದ ಮೊತ್ತ ಸಹ ಬಂತು ಎಂದರೆ ನನಗೆ ಗೊತ್ತಿಲ್ಲ. ಎಫ್.ಡಿ.ಪಿ.ನಂಃ1/2001 ರ ಅಂತಿಮ ಡಿಕ್ರಿಯು ನ್ಯಾಯಾಲಯದ ಆದೇಶದಂತೆ ಜಾರಿಯಾಗಿದೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ465/1999 ರಲ್ಲಿ ನ್ಯಾಯಾಲಯವು ಪ್ರಾಥಮಿಕ ಡಿಕ್ರಿ ಹೊರಡಿಸಿದ ಕಾಲಕ್ಕೆ ವಾದಿಗಳಿಗೆ ಸರ್ವೇ ನಂಃ72/2 ರಲ್ಲಿ 7/24 ನೇ ಹಿಸ್ಸೆ ಬಂದಿತ್ತು ಎಂದರೆ ಸರಿಯಲ್ಲ. ವಾದಿಗಳ ಸರ್ವೇ ನಂಃ72/2 ರಲ್ಲಿ 7/24 ನೇ ಹಿಸ್ಸೆಗೆ ಸಂಬಂದಿಸಿದಂತೆ ಬಹಿರಂಗ ಹರಾಜಿನಲ್ಲಿ ಸ್ವತ್ತನ್ನು ಖರೀದಿಸುವ ಅಧಿಕಾರ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗಳು 1994 ನೇ ಸಾಲಿನಿಂದ ಸರ್ವೇ ನಂಃ72/2 ಕ್ಕೆ ಸಂಬಂದಿಸಿದಂತೆ ತಮ್ಮ ಹಿಸ್ಸೆಗಾಗಿ ಭಾಗಂಶಕ್ಕೆ ದಾವೆಯನ್ನು ಹಾಕಿದ್ದ ಕಾರಣ ಸದರಿ ಸ್ವತ್ತನ್ನು ಹರಾಜು ಪ್ರಕ್ರಿಯೆಯಲ್ಲಿ ಜರುಗಿಸುವ ಪ್ರಶ್ನೆಯೇ ಇಲ್ಲ ಎಂದರೆ ಸರಿಯಲ್ಲ. ಆಸ್ತಿ ವರ್ಗಾವಣೆ ಕಾಯ್ದೆ ಕಲಂಃ 52 ರ ಅಡಿಯಲ್ಲಿ, ಈಗಾಗಲೇ ವಾದಿಗಳು ದಾವೆಯನ್ನು ಸಲ್ಲಿಸಿದ್ದ ಕಾರಣ ನಾನು ಹರಾಜು ಪ್ರಕ್ರಿಯೆಯಲ್ಲಿ ಸ್ವತ್ತನ್ನು ಖರೀದಿಸುವ ಅಧಿಕಾರ ಹೊಂದಿಲ್ಲ ಮತ್ತು ಸದರಿ ಕ್ರಯವು ವಾದಿಗಳ ಹಿಸ್ಸೆಗೆ ಬಂದನಕಾರಿಯಾಗಿಲ್ಲ ಎಂದರೆ ಸರಿಯಲ್ಲ.

**3**. 2 ನೇ ಪ್ರತಿವಾದಿ ಮತ್ತು ನಾನು ಆತ್ಮೀಯ ಸ್ನೇಹಿತರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಸರ್ವೇ ನಂಃ72/2 ರಲ್ಲಿ 20 ಗುಂಟೆ ಸ್ವತ್ತಿನ ಮಾರಾಟದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗಳ ಹಿಸ್ಸೆ ಕಬಳಿಸಬೇಕೆಂಬ ಉದ್ದೇಶದಿಂದ ನಾನು ಮತ್ತು 2 ನೇ ಪ್ರತಿವಾದಿ ಶಾಮೀಲಾಗಿ ನ್ಯಾಯಾಲಯದಲ್ಲಿ ಸ್ವತ್ತನ್ನು ಬಹಿರಂಗ ಹರಾಜಿನಲ್ಲಿ ಖರೀದಿಸಿದಂತೆ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ

ಪ್ರಮಾಣ ಪತ್ರದಲ್ಲಿ ಹೇಳಿರುವ ನಾಗರಾಜ್ ಯಾರೆಂದರೆ 2 ನೇ ಪ್ರತಿವಾದಿ ಮತ್ತು ನಾಗರಾಜ್ ನಡುವೆ 1993 ರಿಂದ ಸಿವಿಲ್ ದಾವೆ ನಡೆಯುತ್ತಿತ್ತು ಎಂದು ಆ ಕಾರಣ ಗೊತ್ತು. 1993 ನೇ ಸಾಲಿನಲ್ಲಿ ಶ್ರೀರಂಗಪಟ್ಟಣದ ನ್ಯಾಯಾಲಯದಲ್ಲಿ ನಾಗರಾಜ್ 2 ನೇ ಪ್ರತಿವಾದಿಯ ವಿರುದ್ದ ಪ್ರೋನೋಟ್ ಆದಾರದ ಮೇಲೆ ಹಣ ವಸೂಲಾತಿಗಾಗಿ ದಾವೆ ಹೂಡಿದ್ದು, ಆಗ ನ್ಯಾಯಾಲಯವು ದಾವೆಯನ್ನು ಡಿಕ್ರಿ ಮಾಡಿ ಬಹಿರಂಗ ಹರಾಜಿನಲ್ಲಿ ಮಾರಾಟಕ್ಕೆ ಇಟ್ಟಾಗ ನಾನು ಅದನ್ನು ಖರೀದಿಸಿದ್ದೇನೆ ಅಷ್ಟೇ ನನಗೆ ಗೊತ್ತಿರುವುದು. ನಾನು 2005 ನೇ ಸಾಲಿನಲ್ಲಿ ನ್ಯಾಯಾಲಯದಿಂದ ಹರಾಜಿನ ಪ್ರಕ್ರಿಯೆಯಲ್ಲಿ ಸ್ವತ್ತನ್ನು ಖರೀದಿಸುವ ಕಾಲಕ್ಕೆ ನಾಗರಾಜ್ ಮತ್ತು 2 ನೇ ಪ್ರತಿವಾದಿ ನಡುವಿನ ಹಣದ ವ್ಯವಹಾರ ಗೊತ್ತಾಯಿತು. 1993 ರಿಂದ ನಾಗರಾಜ್ ಮತ್ತು 2 ನೇ ಪ್ರತಿವಾದಿ ನಡುವಿನ ಹಣದ ವ್ಯವಹಾರ ಇದ್ದ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು).

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಪಾಂಡವಪುರ.**

**ಸಾಕ್ಷಿದಾರರ ಸಹಿ.**